**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 3046/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**

**ದಿನಾಂಕಃ 27.11.2025** **ಸಿಡಬ್ಲ್ಯೂ.04**

| | |
|---|---|
| ಹೆಸರು | ಕರಿಬಸಪ್ಪ |
| ತಂದೆ ಹೆಸರು | ಓಂಕಾರಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಪಾಳ್ಯ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 5 ನನ್ನ ಅಳಿಯ. ಆರೋಪಿ ಪರಿಚಯವಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಕೃತ್ಯಕ್ಕೆ ಬಳಸಿದ ವಾಹನ ಅಮಾನತು ಪಂಚನಾಮೆ ಆಗಿದ್ದು ಅದನ್ನು ನಿಪಿ.8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8 (ಎ) ಎಂದು ಗುರುತಿಸಲಾಯಿತು. ಈಗ ಸುಮಾರು 7-8 ತಿಂಗಳ ಹಿಂದೆ ನಾನು ಮತ್ತು ಚಾಸಾ.5 ಕೆಲಸ ಮುಗಿಸಿಕೊಂಡು ಹರಿಹರದಿಂದ ನಮ್ಮ ಊರಿಗೆ ಹೋಗುವಾಗ ಕಡರನಾಯಕನಹಳ್ಳಿಯಲ್ಲಿ ಒಂದು ಗುಡಿಸಲು ಹತ್ತಿರ ಸಹಿ ಮಾಡಿಸಿಕೊಂಡರು. ಯಾವ ಕಾರಣಕ್ಕಾಗಿ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಸದರಿ ಸಂದರ್ಭದಲ್ಲಿ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ನಿಪಿ.9 ಎಂದು ಗುರುತಿಸಲಾಯಿತು. ಸದರಿ ಛಾಯ ಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.10 ಎಂದು ಸಾಕ್ಷಿಯ ಸಹಿಯನ್ನು ನಿಪಿ.10 (ಎ) ಎಂದು ಗುರುತಿಸಲಾಯಿತು. ಯಾವ ಕಾರಣಕ್ಕಾಗಿ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಒಂದು ಛಾಯ ಚಿತ್ರ ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಗುರುತಿಸಿರುತ್ತಾರೆ. ಸದರಿ ಛಾಯ ಚಿತ್ರವನ್ನು ನಿಪಿ.11 ಎಂದು ಗುರುತಿಸಲಾಯಿತು. ಸದರಿ ಛಾಯ ಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಆರೋಪಿ ಹಸು ಮಾರಾಟ ಮಾಡಿದ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.12 ಎಂದು ಸಾಕ್ಷಿಯ ಸಹಿಯನ್ನು ನಿಪಿ.12 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯ ಚಿತ್ರ ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಗುರುತಿಸಿರುತ್ತಾರೆ. ಸದರಿ ಛಾಯ ಚಿತ್ರವನ್ನು ನಿಪಿ.13 ಎಂದು

ಗುರುತಿಸಲಾಯಿತು. ಸದರಿ ಛಾಯ ಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಪಂಚರಿಗೆ ನೀಡಿದ ನೋಟಿಸ್ ಆಗಿದ್ದು ಅದನ್ನು ನಿಪಿ.14 ಎಂದು ಸಾಕ್ಷಿಯ ಸಹಿಯನ್ನು ನಿಪಿ.14 (ಎ) ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆರೋಪಿಯನ್ನು ಈ ಮೊದಲು ನೋಡಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 22.07.2024 ರಂದು ಪೊಲೀಸರು ನನ್ನನ್ನು ಚಾಸಾ.5 ರವರನ್ನು ಕರೆದು ಮಲೆಬೆನ್ನೂರು ಠಾಣಾ ಆವರಣದಲ್ಲಿ ಆರೋಪಿ ಹಸುಗಳನ್ನು ಕಳ್ಳತನ ಮಾಡಿ ಸಾಗಾಟ ಮಾಡಿದ ವಾಹನವನ್ನು ಜಪ್ತು ಪಡಿಸಿಕೊಳ್ಳಬೇಕು ಎಂದು ಹೇಳಿ ನಮಗೆ ನೋಟಿಸ್ ನೀಡಿದ ಪಂಚರಾಗಿ ಸಹಕರಿಸಬೇಕು ಎಂದು ಕೇಳಿ ನಾವು ಒಪ್ಪಿದ್ದೆವು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ನಿಪಿ.8 ರಂತೆ ಪಂಚನಾಮೆ ಜರುಗಿಸಿ ಕೆಎ 17 ಸಿ 5645 ಟಾಟಾ ಎಸಿ ಗೂಡ್ಸ ವಾಹನವನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಆರೋಪಿ ಸಹ ನಮ್ಮೊಂದಿಗೆ ಇದ್ದರು ಎಂದರೆ ಸರಿಯಲ್ಲ. ಆಗ ನಿಪಿ.9 ರಂತೆ ಛಾಯ ಚಿತ್ರ ತೆಗೆದಿದ್ದು, ಪಂಚನಾಮೆಯನ್ನು ರಾತ್ರಿ 9.10 ರಿಂದ 9.40 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ದಿಃ 24.07.2024 ರಂದು ಸಂಜೆ 7.20 ರಿಂದ ರಾತ್ರಿ 8.00 ಗಂಟೆವರೆಗೆ ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳ ನಂದಿಗುಡಿ ಎಕ್ಕೆಗೊಂದಿ ರಸ್ತೆ ಪಕ್ಕ ಚಾಸಾ.1 ರವರ ಹಸುಗಳನ್ನು ಆರೋಪಿ ಕಳ್ಳತನ ಮಾಡಿರುವುದಾಗಿ ತಿಳಿಸಿ ನನ್ನ ಮತ್ತು ಚಾಸಾ.5 ರವರ ಸಮಕ್ಷಮ ನಿಪಿ.10 ಪಂಚನಾಮೆ ಜರುಗಿಸಿ, ನಿಪಿ.11 ರಂತೆ ಛಾಯ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 8.15 ರಿಂದ 8.45 ರವರೆಗೆ ನಂದಿಗುಡಿ ಎಕ್ಕಗೊಂದಿ ರಸ್ತೆಯ ಗೋಪುರದ ಕೆಳಗೆ ರಸ್ತೆಯಲ್ಲಿ ಆರೋಪಿ ಕಳ್ಳತನ ಮಾಡಿದ ಹಸುಗಳನ್ನು ಮಾರಾಟ ಮಾಡಿದ ಸ್ಥಳದಲ್ಲಿ ನಿಪಿ.12 ಪಂಚನಾಮೆ ಜರುಗಿಸಿ, ನಿಪಿ.13 ರಂತೆ ಛಾಯ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಗುರುತಿಸಲು ನಿರಾಕರಿಸಿದ ಹೇಳಿಕೆಯನ್ನು ನಿಪಿ. 15 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ  ವಕೀಲರಿಂದಃ ಇಲ್ಲ .**

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ